# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.30/2022

CW-2/PW-1

| | | |
|---|---|---|
| ಹೆಸರು | : | ಸುಮಿತ್ರಮ್ಮ |
| ಗಂಡನ ಹೆಸರು | : | ವೆಂಕಟಗಿರಯ್ಯ |
| ವಯಸ್ಸು | : | 54 ವರ್ಷ |
| ವೃತ್ತಿ | : | ಗೃಹಿಣಿ |
| ವಾಸ ಸ್ಥಳ | : | ಐಜೂರು, ರಾಮನಗರ. |
| ದಿನಾಂಕ | : | 22-01-2026 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-1 ನನ್ನ ಮಗಳು. ನಾಲ್ಕು ವರ್ಷಗಳ ಹಿಂದೆ ಸಂಜೆ 4.45 ಗಂಟೆಗೆ ನಾನು ಮತ್ತು ಚಾಸಾ-1 ನನ್ನ ಮಗಳು ಬಾಲಾಜಿ ಆಸ್ಪತ್ರೆಯಿಂದ ನಮ್ಮ ಮನೆ ಕಡೆ ಹೋಗುತ್ತಿದ್ದಾಗ ಶಿವು ಬೇಕರಿ ಪಕ್ಕದಲ್ಲಿ ಇಬ್ಬರು ದ್ವಿಚಕ್ರ ವಾಹನದಲ್ಲಿ ಬಂದು ನನ್ನ ಮಗಳ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಹೊರಟು ಹೋದರು. ನನ್ನ ಮಗಳು ಹಿಂಬಾಲಿಸಿಕೊಂಡು ಹೋದಳು, ಅವರು ಸಿಗಲಿಲ್ಲ. ನಂತರ ನಾನು ಮತ್ತು ನನ್ನ ಮಗಳು ರಾಮನಗರದ ಪೊಲೀಸ್ ಠಾಣೆಗೆ ದೂರು ಕೊಟ್ಟೆವು. ಘಟನೆಯಾದ ಒಂದು ವರ್ಷದ ನಂತರ ಪೊಲೀಸರು ಕರೆ ಮಾಡಿ ಠಾಣೆಗೆ ಕರೆಯಿಸಿ, ಚಿನ್ನದ ಸರ ಸಿಕ್ಕಿದೆ ಎಂದು ಹೇಳಿದರು. ಅದನ್ನು ನಾವು ಬಿಡಿಸಿಕೊಂಡೆವು. ನನ್ನ ಮಗಳ ಚಿನ್ನದ ಸರವನ್ನು ದರೋಡೆ ಮಾಡಿದ ಇಬ್ಬರು ಆಸಾಮಿಗಳನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ತೋರಿಸಿದರು. ಆ ಆಸಾಮಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಆರೋಪಿಯನ್ನು ಬೆಂಗಳೂರಿನ ಕೇಂದ್ರ ಕಾರಾಗೃಹದಿಂದ ವಿ.ಸಿ. ಮುಖಾಂತರ ಹಾಜರುಪಡಿಸಿದ್ದು ಆತನನ್ನು ನೋಡಿ ಸಾಕ್ಷಿ ಆತನೇ ಇರಬಹುದು ಎಂದು ನುಡಿದಿರುತ್ತಾರೆ. ನನ್ನ ಮಗಳ ಚೈನನ್ನು ನೋಡಿದರೆ ಗುರುತಿಸಬಲ್ಲೆ. ಅದರ

ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್.ಎಸ್., ವಕೀಲರಿಂದಃ-</u>

ನಾನು ಎಸ್.ಎಸ್.ಎಲ್.ಸಿ.,ವರೆಗೆ ಕಲಿತಿದ್ದೇನೆ. ಚಾಸಾ-1 ಎಂ.ಸಿ.ಎ., ಮಾಡಿದ್ದಾರೆ. ಕೃತ್ಯ ನಡೆದ ಸ್ಥಳದಿಂದ ಐಜೂರು ಪೊಲೀಸ್ ಠಾಣೆ ಒಂದು ಕಿಲೋ ಮೀಟರ್ ಸಹ ಆಗುವುದಿಲ್ಲ ಎಂದರೆ ಸರಿ. ಕೃತ್ಯ ನಡೆದ ದಿನವೇ ದೂರು ಕೊಟ್ಟಿದ್ದೇವೆ. ದೂರು ಬರೆದಾಗ ನಾನು ಇರಲಿಲ್ಲ. ನನ್ನ ಮಗಳ ಚಿನ್ನದ ಸರವನ್ನು ಕಿತ್ತುಕೊಂಡು ಹೋದ ತಕ್ಷಣ ಪೊಲೀಸರಿಗೆ ಕರೆ ಮಾಡಲಿಲ್ಲ, ಠಾಣೆಗೆ ಹೋದೆವು. ಸಂಜೆ 4.45 ಗಂಟೆ ಸಮಯಕ್ಕೆ ಬಿಸಿಲು, ಬೆಳಕು ಇರುತ್ತದೆ ಎಂದರೆ ಸರಿ. ಆ ಸಮಯಕ್ಕೆ ಸುಮಾರು ಜನರು ಓಡಾಡುತ್ತಾರೆ ಎಂದರೆ ಸಾಕ್ಷಿಯು ಆ ಜಾಗದಲ್ಲಿ ಆ ಸಮಯದಲ್ಲಿ ಅಷ್ಟು ಜನ ಓಡಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಯಾವುದೇ ವ್ಯಕ್ತಿ ಗಾಡಿಯಲ್ಲಿ ವೇಗವಾಗಿ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆಸಾಮಿಗಳು ಬಂದಿದ್ದ ಗಾಡಿಯ ನಂಬರ್ ನನಗೆ ಗೊತ್ತಿಲ್ಲ. ಅವರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ಗಮನಿಸಿಲ್ಲ. ಕೃತ್ಯ ನಡೆದ ಸ್ಥಳದ ಅಕ್ಕಪಕ್ಕ ಅಂಗಡಿಗಳಲ್ಲಿ ಸಿ.ಸಿ. ಕ್ಯಾಮೆರಾ ಇದೆ ಎಂದರೆ ಸರಿ. ಆರೋಪಿಯನ್ನು ಕೃತ್ಯ ನಡೆದ ಸ್ಥಳದಲ್ಲಿ ಆ ದಿನ ನೋಡಿಲ್ಲ, ಈ ದಿನ ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. ಸಾಕ್ಷಿಯು ಮುಂದುವರೆದು ಸಿ.ಸಿ. ಟಿ.ವಿ.ಯಲ್ಲಿ ಪೊಲೀಸರು ತೋರಿಸಿದ್ದರು, ಅಷ್ಟಾಗಿ ಕ್ಲಾರಿಟಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ಸರ ಕಳ್ಳತನವಾಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ಚಿನ್ನದ ಸರ 12 ಗ್ರಾಂ ತೂಕ ಇತ್ತು. ಅದನ್ನು ಖರೀದಿ ಮಾಡಿ ಎಷ್ಟು ದಿನಗಳಾಗಿತ್ತು ಎಂದು ಗೊತ್ತಿಲ್ಲ. ಅದರ ಬಿಲ್ಲನ್ನು ಇಟ್ಟುಕೊಂಡಿಲ್ಲ.

<u>ಸಿ.ಸಿ. ನಂ.30/2022ರಲ್ಲಿ</u>
CW-2/PW-1

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.